ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ನೀವು ಡಿಸ್ಟ್ರಿಕ್ಟ್‌ವಾರು ಅಲಾಟ್ ಮಾಡುವ ಹಣ ಮತ್ತು ಗ್ರಾಮಪಂಚಾಯಿತಿಗಳಿಗೆ ಕೊಡುವ ಅಸ್ಸೈನ್‌ಮೆಂಟ್ ಗ್ರಾಂಟು ವಗೈರೆ ಆಯಾಕ್ಷೇತ್ರದ ಸದಸ್ಯರಿಗೆ ಗೊತ್ತಾಗುಪ್ರಹಾಗೆ ಹೇಳ್ಚುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾವಾರು ಅಲಾಟ್‌ಮೆಂಟ್ ಮಾಡುತ್ತೇವೆ. ಅದಕ್ಕೆ ಸಮಿತಿಯಿದೆ. ಸಮಿತಿಯವರು ಅಂದರೆ ಜಿಲ್ಲಾ ಸಮಿತಿಯವರು ಮತ್ತು ತಾಲ್ಲೂಕು ಅಡ್ವೈಜರಿ ಸಮಿತಿಯವರು ಅಡ್ಜಸ್ಟ್‌ಮೆಂಟ್ ಮಾಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆಯಾ ಕ್ಷೇತ್ರದ ಪ್ರತಿನಿಧಿಗಳಿಗೆ ಗೊತ್ತಾಗುವ ಹಾಗೆ ಅಥವಾ ಅವರು ಸೂಚಿಸುವ ಕೆಲಸಗಳಿಗೆ ಹಂಚಿಕೆಮಾಡುವ ಹಾಗೆ ವ್ಯವಸ್ಥೆ ಮಾಡಿದೆಯೆ?

ಶ್ರೀ ಟಿ. ಚನ್ನಯ್ಯ.—ಇಲ್ಲ; ನಾವು ತಿಳಿಸುವುದಕ್ಕೆ ಮೊದಲೇ ಅವರೇ ತಿಳಿದುಕೊಳ್ಳುತ್ತಾರೆ, ತಿಳಿದು ಕೊಂಡು ತಕ್ಕ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಿರ್ದಿಷ್ಟವಾದ ಪ್ಲಾನ್ ಇಲ್ಲದೆ ಎಲ್ಲ ಒತ್ತಾಯವಿದೆಯೋ, ಸರ್ಕಾರದಲ್ಲಿ ಯಾರು ಹೆಚ್ಚು ಪ್ರೆಷರ್ ಹಾಕುತ್ತಾರೋ ಅಂಥ ಕಡೆಗೆ ಮಾತ್ರ ಹಂಚಿ ಬಾಕಿ ಕಡೆ ಹಂಚದಿರುವ ನೀತಿ ಸರ್ಕಾರದಲ್ಲಿದೆಯೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಅಂಥ ನೀತಿಯನ್ನನುಸರಿಸುತ್ತಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಒಂದು ಕಡೆ ವಿಶೇಷ ಗ್ರಾಂಟು ವಿಶೇಷ ಕೆಲಸ, ಇನ್ನೊಂದು ಕಡೆ ಯಾವ ಕೆಲಸವನ್ನೂ ಕೈಕೊಳ್ಳದಿರುವುದು ಸರ್ಕಾರದ ನೀತಿಯೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ನೀತಿ ಅದಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದಕ್ಕೆ ಯಾವುದಾದರೂ ಪ್ಲಾನ್ ಮಾಡಿದ್ದೀರಾ? ಡಿಸ್ಟ್ರಿಕ್ಟ್‌ಗೆ ಕೊಡುವ ಹಣ ಪ್ಲಾನ್ಡ್ ಬೇಸ್ಡ್‌ನ ಮೇಲೆ ಹಂಚಿಕೆಯಾಗುತ್ತಿದೆಯೆ?

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಡಿಸ್ಟ್ರಿಕ್ಟ್ ಬೋರ್ಡಿನವರೂ ಕೂಡ ಸ್ಪೆಸಿಫಿಕ್ ಪ್ರಪೋಸಲ್, ಯೋಜನೆ ಹಾಕಿ ಪ್ರಯಾರಿಟಿ ಕೊಡಬೇಕಾದ್ದನ್ನು ಮೊದಲು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗಿನ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳ ಆಕ್ಟ್ 1952ನೆಯ ಇಸವಿ ಫೆಬ್ರವರಿಯಲ್ಲಿ ತಾನೆ ಜಾರಿಗೆ ಬಂದಿರುವುದು?

ಶ್ರೀ ಟಿ. ಚನ್ನಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಕಾನೂನು ಪ್ರಕಾರ ಪಂಚಾಯಿತಿ ಕೋಟಾ ಕೊಡುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಡಿಸ್ಟ್ರಿಬ್ಯೂಟ್ ಮಾಡದಿದ್ದುದು ಕಾನೂನಿಗೆ ವಿರೋಧವಾಗುವುದಿಲ್ಲವೇ!

ಶ್ರೀ ಟಿ. ಚನ್ನಯ್ಯ.—ಇಲ್ಲ.

District Board Roads, Bangalore District

Q.—800. Sri K. V. BYRE GOWDA (Bangalore North).—

Will the Government be pleased to state :—

(*a*) the length of District Board roads in the Bangalore North taluk;

(*b*) of them the names of roads which have been metalled;

(*c*) whether these roads are fit for vehicular traffic during rainy season?

A.—Sri T. CHANNIAH (Minister for Public Health and Local Self-Government).—

(*a*) 49 miles 3 furlongs.

(*b*) 1. Road from 5/15 of Bangalore-Doddaballapur road (Rajanakunte to Kakol) and on to Grass Farm.

2. Road From 6/6 of Hennur-Kannur road to Bagalur.

3. Road from 2/3 of Bangalore-Nagavara road to Kaval Byrasandra.

4. Road from 8/7 of Bangalore-Mysore road to Tavarekre *via* Hullal.

5. Road from Grass farm to Byatha.

6. Road from 1/5 of Bangalore-Tumkur road up to Yelahanka *via* Dodbettahalli.

7. Road from Nagavara to Thanisandra (under progress).

8. Road from 6th mile of Bangalore-Bellary road to Thindlu *via* Kodigehalli.

9. Road from Water Supply road to Hessarghatta.

10. Road from Bangalore-Bellary road to Jakkur.

11. Road from Yelahanka to Jakkur (under progress).

(*c*) Yes, they are fit for other than motor traffic during rainy season.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರದವರು ಮುಖ್ಯ ಮುಖ್ಯವಾದ ರಸ್ತೆಗಳನ್ನೆಲ್ಲ ರಾಷ್ಟ್ರೀಕರಣ ಮಾಡಿದ ನಂತರ ಈ ಬಸ್ಸುಗಳ ಓಡಾಟ ಜಿಲ್ಲಾ ಬೋರ್ಡು ರಸ್ತೆಗಳಲ್ಲಿ ಜಾಸ್ತಿಯಾಗಿರುತ್ತೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರಿನಿಂದ ಹೊರಡತಕ್ಕ ಎಲ್ಲ ರಸ್ತೆಗಳನ್ನೂ ರಾಷ್ಟ್ರೀಕರಣ ಮಾಡಿಕೊಂಡಿರುವ ದರಿಂದ ತಾವೀಗ ಉತ್ತರದಲ್ಲಿ ತಿಳಿಸಿರುವ ನಂಬರ್ 1, 2, 5 ಮತ್ತು 6ನೆಯ ಐಟಂನಲ್ಲಿ ಕಂಡ

ರಸ್ತೆಗಳಲ್ಲಿ ಬಸ್ಸುಗಳ ಓಡಾಟ ಜಾಸ್ತಿಯಾಗಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹಾಗೆ ಜಾಸ್ತಿಯಾಗಿದ್ದರೂ ಆಗಿರಬಹುದು. ಆದರೆ ಅದು ನನ್ನ ಗಮನಕ್ಕೇನೂ ಬಂದಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ತಾವು ಇಲ್ಲಿ (ಸಿ) ಗೆ ಒದಗಿಸಿರುವ ಉತ್ತರದ ಪ್ರಕಾರ ಆ ರಸ್ತೆಗಳು ಬಸ್ಸು ಸಂಚಾರಕ್ಕೆ ಸರಿಯಾಗಿಲ್ಲವೆಂದು ತಿಳಿದುಬಂದಿದ್ದಾಗೂ ತಾವು ಅಲ್ಲಿ ಬಸ್ಸನ್ನು ಓಡಿಸಲು ಲೈಸೆನ್ಸ್ ಪರ್ಮಿಟ್ ಕೊಟ್ಟಿದ್ದೀರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ಈ ಬಸ್ಸುಗಳಿಗೆ ಯಾರು ಪರ್ಮಿಟ್ ಕೊಡುವವರು?

ಶ್ರೀ ಟಿ. ಚನ್ನಯ್ಯ.—ಸಂಬಂಧಪಟ್ಟ ಅಧಿಕಾರಿಗಳು.

ಶ್ರೀ ಕೆ. ಎ. ಬೈರೇಗೌಡ.—ರಸ್ತೆ ಸರಿಯಾಗಿಲ್ಲದಿದ್ದರೂ ಏಕೆ ಪರ್ಮಿಟ್ಟನ್ನು ಕೊಟ್ಟರು ?

ಶ್ರೀ ಟಿ. ಚನ್ನಯ್ಯ.—ಅವರು ಕೊಟ್ಟೇ ಕೊಡಬೇಕೆಂದು ಒತ್ತಾಯ ಪಡಿಸಿರಬಹುದು. ವಿಧಿಯಿಲ್ಲದೆ ಅವರ ಕಾಟಕ್ಕಾಗಿ ಕೊಟ್ಟಿರಬಹುದು.

ಶ್ರೀ ಕೆ. ಎ. ಬೈರೇಗೌಡ.—ಈ ರಸ್ತೆಗಳಿಗೆ ಈಗ ಆದರೂ ಪೂರ್ತಿ ಮೆಟಲ್ ಹಾಕುವಂತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಆ 49 ಮೈಲಿ 3 ಫರ್ಲಾಂಗ್ ರಸ್ತೆ ಪೈಕಿ 19 ಮೈಲಿಯಷ್ಟು ರಸ್ತೆಗೆ ಮೆಟಲ್ ಹಾಕಿಸಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ತಾವು ಈ ಉತ್ತರ ನಂಬರ್ 7 ರಲ್ಲಿ ಸೂಚಿಸಿರತಕ್ಕ ರಸ್ತೆ, ಬೆಂಗಳೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗಿರುತ್ತದೆಯೆಂಬ ಅಂಶ ತಮಗೆ ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಹೌದು, ಗೊತ್ತಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ರಸ್ತೆಯಲ್ಲಿ ಕೇವಲ 3 ಫರ್ಲಾಂಗ್ ಮಾತ್ರ ರಿಪೇರಿ ಮಾಡಿ ಬಾಕಿ ರಸ್ತೆಯನ್ನು ಏಕೆ ಹಾಗೇ ಕೈ ಬಿಟ್ಟಿದ್ದಾರೆ?

ಶ್ರೀ ಟಿ. ಚನ್ನಯ್ಯ.—ಅಷ್ಟು ಮಾತ್ರ ಆ ಸಿಟಿ ಮುನಿಸಿಪಾಲ್ಟಿ ಸರಹದ್ದಿನಲ್ಲಿತ್ತು. ಅದನ್ನು ಅವರೆ ಮಾಡಿಸಿರುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಉಳಿದ ರಸ್ತೆಯನ್ನು ಜಲ್ಲಿ ಮಾಡತಕ್ಕವರು ಯಾರು ?

ಶ್ರೀ ಟಿ. ಚನ್ನಯ್ಯ.—ಸಂಬಂಧಪಟ್ಟ ಜಿಲ್ಲಾ ಬೋರ್ಡಿನವರು.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ತಾವು ಇಲ್ಲಿ ತಿಳಿಸಿರುವ ಬಾಗಲೂರು ರಸ್ತೆ 7/12 ಮೈಲಿಯುಂದ ಮುಂದಿರತಕ್ಕ ರಸ್ತೆ ಜಿಲ್ಲಾ ಬೋರ್ಡು ರಸ್ತೆಯಲ್ಲವೇ?

ಶ್ರೀ ಟಿ. ಚನ್ನಯ್ಯ.—ಇರಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ತಾವು ಸರಿಯಾಗಿ ಉತ್ತರ ಓದಗಿಸಲು ತಮ್ಮ ಕೈಕೆಳಗಿನ ಅಧಿಕಾರಿಗಳು ತಮಗೆ ಸರಿಯಾಗಿ ಅಂಕೀ ಅಂಶಗಳನ್ನು ಒದಗಿಸುತ್ತಿಲ್ಲವೇನು ?

ಶ್ರೀ ಟಿ. ಚನ್ನಯ್ಯ.—ಯಾವುದಾದರೂ ರಸ್ತೆ ಹಾಗೆ ಕೆಟ್ಟುಹೋಗಿದ್ದರೆ ಖಚಿತವಾಗಿ ತಿಳಿಸಿ. ಅವುಗಳನ್ನು ಸರಿ ಮಾಡಿಸುತ್ತೇವೆ. ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ನೋಡೋಣ. ಹಣ ಒದಗಿದ ಹಾಗೆಲ್ಲ ರಸ್ತೆಗಳನ್ನು ರಿಪೇರಿ ಮಾಡಿಸುತ್ತಿದ್ದೇವೆ. ನಿಮಗೆ ಪಟ್ಟಿಯಲ್ಲಿ ರಸ್ತೆಗಳ ಉದ್ದ ಮತ್ತು ಹೆಸರುಗಳನ್ನು ತಿಳಿಸಿದ್ದೇವೆ.

ಶ್ರೀ ಕೆ. ಪ್ರಭಾಕರ್.—ತಾವು ರಸ್ತೆಗಳ ರಾಷ್ಟ್ರೀಕರಣ ಮಾಡಿಕೊಂಡ ನಂತರ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳಲ್ಲಿ ಈ ಬಸ್ಸುಗಳ ಸಂಚಾರ ಜಾಸ್ತಿಯಾಗಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸ್ವಲ್ಪವಷ್ಟಿಗೆ ಇರಬಹುದು.

ಶ್ರೀ ಕೆ. ಪ್ರಭಾಕರ್.—ಈ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳಲ್ಲಿ ಮೋಟಾರ್ ವಾಹನಗಳು ಹೋಗಲು ಅನುಕೂಲವಿಲ್ಲ ವೆಂಬುದಾಗಿ ತಾವು ಉತ್ತರದಲ್ಲಿ ತಿಳಿಸಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು ತಿಳಿಸಿದೆ.

ಶ್ರೀ ಕೆ. ಪ್ರಭಾಕರ್.—ತಾವು ಬಸ್ ಜನರುಗಳಿಗೆಲ್ಲ ತೊಂದರೆಯಾಗಲಿ ಎನ್ನುವ ಉದ್ದೇಶದಿಂದಲೇ ಅವರಿಗೆ ಪರ್ಮಿಟ್ ಕೊಟ್ಟಿರುವುದರಿಂದ ಈ ವಿವರ ಅವರ ಕಷ್ಟಗಳಿಗೆ ಮದ್ದಿಲ್ಲದಂತಾಗಿದೆ ಎಂಬುದು ತಮಗೆ ಗೊತ್ತಿದೆಯೇ ?

ಅಧ್ಯಕ್ಷರು.—ಹಣದ ಅನುಕೂಲತೆ ಉಂಟಾದ ಹಾಗೆ ರಸ್ತೆಗಳನ್ನು ಮೆಟಲ್ ಮಾಡಿಸುತ್ತಿದ್ದಾರೆಂದು ಉತ್ತರ ಹೇಳಿದ್ದಾರೆ. 49 ಮೈಲುಗಳ ಪೈಕಿ 16 ಮೈಲುಗಳಿಗೆ ಮೆಟಲಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಈ ಬಸ್ ಮಾಲೀಕರುಗಳು ಲೈಸೆನ್ಸಿಗೆ ಅರ್ಜಿ ಹಾಕಿಕೊಂಡಾಗ ಆ ರಸ್ತೆಗಳಲ್ಲಿ ಬಸ್ ಹೋಗುವುದಕ್ಕೆ ಅವಕಾಶವಿದೆಯೇ ಅಥವಾ ಇಲ್ಲವೇ ಎನ್ನುವ ಅಭಿಪ್ರಾಯವನ್ನು ಕೊಡತಕ್ಕ ಅಧಿಕಾರಿಗಳು ಯಾರು ?

ಶ್ರೀ ಟಿ. ಚನ್ನಯ್ಯ.—ಕೆಲವು ರಸ್ತೆಗಳಿಗೆ ಜಿಲ್ಲಾ ಬೋರ್ಡಿನ ಅಧಿಕಾರಿಗಳು ಕೊಡುತ್ತಾರೆ. ಮತ್ತೆ ಕೆಲವು ರಸ್ತೆಗಳಿಗೆ P.W.D. ಕೊಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ರಸ್ತೆಗಳಲ್ಲಿ ಮೋಟಾರ್ ವಾಹನಗಳು ಹೋಗುವುದಕ್ಕೆ ಅನುಕೂಲವಿದ್ದರೆ ತಾನೆ ಅವರು ಲೈಸೆನ್ಸ್ ಮಂಜೂರಾತಿಗೆ ಅಭಿಪ್ರಾಯ ಕೊಡಬೇಕು ?

ಶ್ರೀ ಟಿ. ಚನ್ನಯ್ಯ.—ಅದನ್ನೆಲ್ಲಾ ನೋಡಿಕೊಂಡೇ ಅವರು ಪರ್ಮಿಟ್ಟುಗಳನ್ನು ಕೊಡುತ್ತಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರಸ್ತೆಗಳು ಹಾಗೆ ಮೋಟಾರ್ ವಾಹನಗಳ ಸಂಚಾರಕ್ಕೆ ಸರಿಯಾಗಿಲ್ಲದಿದ್ದಾಗ್ಯೂ, ಅದನ್ನು ತಿಳಿದೂ ತಿಳಿದೂ ಆ ಅಧಿಕಾರಿಗಳು ಹೇಗೆ ಅಲ್ಲಿ ಬಸ್ಸುಗಳನ್ನೋಡಿಸಲು ಅವಕಾಶ ಕೊಟ್ಟರು ?

ಶ್ರೀ ಟಿ. ಚನ್ನಯ್ಯ.—ನಾನಾಗಲೇ ತಿಳಿಸಿದ ಹಾಗೆ, ಆ ಬಸ್ ಮಾಲಕರೆಲ್ಲೋ ಈ ಪರ್ಮಿಟ್‌ಗಳನ್ನು ಕೊಟ್ಟೇ ಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಆಗ ವಿಧಿಯಿಲ್ಲದೆ. ಅವರು ಕೊಟ್ಟಿರಬಹುದು.

ಒಬ್ಬ ಮಾನ್ಯ ಸದಸ್ಯರು.—ಈ ಹೆಣ್ಣೂರು-ಕಣ್ಣೂರು ರಸ್ತೆ ಎಲ್ಲದೆ ಎನ್ನುವುದನ್ನು ತಾವು ನೋಡಿದ್ದೀರಾ ? ತಮಗೆ ಈ ರಸ್ತೆ ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಗೊತ್ತಿದೆ. ಆ ಎರಡು ಊರುಗಳೂ ಬೆಂಗಳೂರಿನ ಪಕ್ಕದಲ್ಲೆ ಇವೆ.